


International Journal of Kannada Research
www.kannadajournal.com

**ISSN: 2454–5813**
IJKR 2017; 3(4): 14-16
© 2017 IJKR
www.kannadajournal.com
Received: 05-08-2017
Accepted: 06-09-2017

**ಜಗದೀಶ ಮುಗಳಿ**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

**Correspondence**
**ಜಗದೀಶ ಮುಗಳಿ**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

# ಭಟ ಖಡ್ಗ ಮಂಡಲೋತ್ಪಲ ವನವಿಭ್ರಮ ಭ್ರಮರಿ

**ಜಗದೀಶ ಮುಗಳಿ**

ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಚಂಪೂ ಕಾವ್ಯಗಳೂ ಇಂದಿಗೂ ಹಲವು ನಿಗೂಢ ಅರ್ಥಛಾಯೆಗಳನ್ನು ಬಿಚ್ಚಿ ಹೇಳುತ್ತಲೇ ಇವೆ. ಅವು ಜಗತ್ತಿನ ಮಹಾಕಾವ್ಯಗಳ ಹಲವು ಎತ್ತರದ ತುತ್ತತುದಿಗಳನ್ನು ಮುಟ್ಟಿ ಮೆಟ್ಟಿ ನಿಲ್ಲಬಲ್ಲವು ಎಂದರೆ ಅತಿಶೋಕ್ತಿಯಾಗಲಾರದು. ಹಲವು ಜನ ಸಂಶೋಧಕರು, ವಿಮರ್ಶಕರು ಪಂಪನ ಕಾವ್ಯಗಳ ಹಾಸು-ಬಿಸುಗಳನ್ನು, ಆಳೆತ್ತರಗಳನ್ನೂ ಜನತೆಗೆ ತಿಳಿಯಪಡಿಸಲು ಹಲವು ರೀತಿಯಿಂದ ಪ್ರಯತ್ನ ಮಾಡಿದ್ದರೂ ಇನ್ನೂ ಹಲವು ಅರ್ಥಗಳು ಹೊರಬರುತ್ತಲೇ ಇವೆ.

ಕವಿಪಂಪನ ಆದಿಪುರಾಣವು ಮುಖ್ಯವಾಗಿ ಧಾರ್ಮಿಕ ಕಾವ್ಯವಾಗಿದೆ. ಪ್ರಥಮ ತೀರ್ಥಂಕರರಾದ ವೃಷಭದೇವರ ಚರಿತ್ರೆಯನ್ನು ಕಾವ್ಯವಸ್ತುವನ್ನಾಗಿ ಆರಿಸಿಕೊಂಡಿರುವುದರಿಂದ ಧರ್ಮದ ಸಂಪ್ರದಾಯಕ್ಕನುಗುಣವಾಗಿಯೇ ಬರೆಯಲಾಗಿದೆ. 'ನೆಗಟ್ದ ಆದಿಪುರಾಣದೊಳ್- ಅಜಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಹೇಳಿಕೊಂಡು ಜೊತೆಜೊತೆಗೆ 'ಕಾವ್ಯಧರ್ಮ-ಧರ್ಮ'ಗಳೆರಡನ್ನೂ ಸಾಧಿಸಬೇಕೆಂಬುದು ಪಂಪನ ಪ್ರಯತ್ನವಾಗಿದೆ. ಆದಿಪುರಾಣದ ಹದಿನಾಲ್ಕನೆಯ ಆಶ್ವಾಸದಲ್ಲಿ ಭರತ-ಬಾಹುಬಲಿಯ ಯುದ್ಧದ ಸನ್ನಿವೇಶಗಳು ಸ್ವಾರಸ್ಯಪೂರ್ಣವಾಗಿ, ಔಚಿತ್ಯಪೂರ್ಣವಾಗಿ ಮೂಡಿಬಂದಿವೆ. ಅಲ್ಲಿ ಹಿಂಸೆ ಇಲ್ಲ, ಕ್ರೌರ್ಯ ಇಲ್ಲ, ಅನೈತಿಕತೆ ಇಲ್ಲ, ರಕ್ತಪಾತವಿಲ್ಲ, ಸಂಪತ್ತಿನ ಅಪವ್ಯಯವಿಲ್ಲ, ನಷ್ಟವಿಲ್ಲ, ಸಾವು-ನೋವುಗಳಿಲ್ಲ ಆದ್ದರಿಂದಲೇ ಅವರಿರ್ವರ ನಡುವೆ ನಡೆದ ಯುದ್ಧವನ್ನು 'ಧರ್ಮಯುದ್ಧ' ಎನ್ನಲಾಗಿದೆ. ಭರತ-ಬಾಹುಬಲಿಯರ ನಡುವೆ ಧರ್ಮಯುದ್ಧಗಳಾದ ದೃಷ್ಟಿಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧಗಳು ನಡೆಯುತ್ತವೆ. ಈ ಮೂರು ಧರ್ಮಯುದ್ಧಗಳಲ್ಲಿಯೂ ಬಾಹುಬಲಿ ಗೆಲ್ಲುತ್ತಾನೆ. ಭರತನು ಸೋಲುತ್ತಾನೆ. ನಂತರ ಸೋತ ಭರತನು ಆಯುಧಾಗಾರದಲ್ಲಿ ಹುಟ್ಟಿದ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗಿಸುತ್ತಾನೆ. ಆ ಚಕ್ರರತ್ನವು ಬಾಹುಬಲಿಯನ್ನು ಭೇದಿಸಲಾರದೆ ಬಾಹುಬಲಿಯನ್ನು ಪ್ರದಕ್ಷಿಣೆ ಹಾಕಿ, ಆತನ ಬಲಭುಜದ ಪಕ್ಕದಲ್ಲಿ ಬಂದು ಪ್ರತಾಪಹೀನವಾಗಿ ನಿಲ್ಲುತ್ತದೆ.

> "ತನಗಲ್ಲುದುದಂ ಮಾಡಿದ
> ನಿನಿಸಂ ಚಕ್ರೇಶನೆಂಬ ಕುಲವೃಧರ ಭೂ
> ವನಿತಾಧೀಶರ ನುಡಿಗ

ಳ್ಗೆ ನಾಣ್ಚಿದಂ ಭರತರಾಜನವನತಮಕುಟಂ" (ಆದಿಪುರಾಣ: ಸಂಧಿ-೧೪, ಪದ್ಯ-೧೧೯)

ಭರತ ರಾಜನು ತನ್ನ ಯೋಗ್ಯತೆಗೆ ತಕ್ಕುದಲ್ಲದುದನ್ನು ಮಾಡಿದ ಎಂಬ ಕುಲವೃದ್ಧರ ಮಾತುಗಳಿಗೆ ಭರತನು ನಾಚಿಕೊಂಡು ತಲೆಬಾಗಿಸಿದನು. ಮಿಂಚಿನ ಕಾಂತಿಯಂತೆ ಇರುವ ಚಂಚಲವಾದ ರಾಜ್ಯವ್ಯಾಮೋಹವನ್ನು ಕಳಚಿಕೊಳ್ಳುವುದು ಬಲುಕಷ್ಟ. ಮನುಕುಲತಿಲಕನಾದ ಭರತೇಶನಿಗೂ ಈ ರಾಜ್ಯವ್ಯಾಮೋಹ ತಪ್ಪಲಿಲ್ಲ ಅಂದಮೇಲೆ ಇತರ ಸಾಮಾನ್ಯ ರಾಜರಿಗೆ ರಾಜ್ಯವ್ಯಾಮೋಹ ತ್ಯಾಗವು ಸಾಧ್ಯವೆ? ಇಂಥ ರಾಜ್ಯಶ್ರೀಯು ಅಣ್ಣ-ತಮ್ಮಂದಿರ ನಡುವೆ, ತಂದೆ-ಮಕ್ಕಳ ನಡುವೆ ಮನಸ್ತಾಪವನ್ನು ಉಂಟುಮಾಡುತ್ತದೆ.

"ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ

ವೀ ದೊರೆತನ ತೊಡರ್ವುದೆಂತು ರಾಜ್ಯಶ್ರೀಯೊಳ್"
(ಆದಿಪುರಾಣ:ಸಂಧಿ-೧೪,ಪದ್ಯ-೧೩೦)

ಅಣ್ಣ ಭರತನ ಈ ವರ್ತನೆಯನ್ನು ಕಂಡು ಕ್ಷಣಾರ್ಧದಲ್ಲಿ ಬಾಹುಬಲಿಗೆ ವೈರಾಗ್ಯದ ಮೊಳಕೆ ಒಡೆಯುತ್ತದೆ. ಚಂಚಲೆಯಾದ ರಾಜಲಕ್ಷ್ಮೀಯ ಮೇಲೆ ಅಣ್ಣನ ವ್ಯಾಮೋಹ ಮತ್ತು ಆ ರಾಜ್ಯಲಕ್ಷ್ಮೀಯ ಚಂಚಲತೆಯನ್ನು ಕಂಡು ಬಾಹುಬಲಿಯ ಮನಸ್ಸು ವೈರಾಗ್ಯ ತಾಳುತ್ತದೆ. ಈ ಸಂದರ್ಭದಲ್ಲಿ ಬಾಹುಬಲಿಯೇ ಅಣ್ಣನಾದ ಭರತನನ್ನು ಸಮಾಧಾನ ಪಡಿಸುತ್ತಾನೆ:

"ನೆಲೆಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀಭಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜಲಕ್ಷ್ಮೀ
ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲಂತಾಗಿಗಂ ಧರೆಮಾಟಿಸಿದಂದು ನೆಗಟ್ತೆ
ಮಾಸದೇ"
(ಆದಿಪುರಾಣ: ಸಂಧಿ-೧೪, ಪದ್ಯ-೧೩೦)

ಯೋಧರ ಖಡ್ಗಗಳೆಂಬ ಉತ್ಪಲವನದಲ್ಲಿ ಸೊಗಸಿನಿಂದ ನಲಿಯುವ ದುಂಬಿಯಂತಿರುವವಳೂ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುವವಳೂ ಆದ ರಾಜ್ಯಲಕ್ಷ್ಮೀಯು ನಿನ್ನ ಎದೆಯ ಮೇಲೆ ನಿಶ್ಚಲವಾಗಿ ನೆಲೆಸಿರಲಿ! ನನ್ನಯ್ಯನಿತ್ತ ರಾಜ್ಯವನ್ನು ನಿನಗೆ ಸಮರ್ಪಿಸುವೆನು. ನೀನು ಭಯಸಿರುವ ಹೆಣ್ಣನ್ನೂ, ಭೂಮಿಯನ್ನು ನಾನು ಬಯಸಿದರೆ, ನನ್ನ ಕೀರ್ತಿಯು ಮಾಸದೆ? ಎಂದು ಬಾಹುಬಲಿ ಈ ಚಂಚಲ ರಾಜಲಕ್ಷ್ಮೀಯನ್ನು ವಿನಯದಿಂದಲೇ ನಿರಾಕರಿಸುತ್ತಾನೆ.

ಪಂಪಕವಿ ಕ್ರೂರ ಯುದ್ಧದ ಸನ್ನಿವೇಶ ಮತ್ತು ರಾಜ್ಯಲಕ್ಷ್ಮೀಯ ಚಂಚಲತೆಯನ್ನು ಹೇಳುವ ಸಂದರ್ಭದಲ್ಲಿ ನಡುವೆ ಕನ್ನೈದಿಲೆಯನ್ನು ತಂದದ್ದೊಂದು ಆಶ್ಚರ್ಯ. ಅಷ್ಟೇ ಅಲ್ಲ 'ವನ ವಿಭ್ರಮ ಭ್ರಮರಿ' ಎನ್ನುವ ಮಾತು ರಾಜಲಕ್ಷ್ಮೀಯ ವೈಭವ, ಚಂಚಲತೆ, ಕ್ಷಣಿಕತೆ, ವಾಲುವಿಕೆಯ ಸನ್ನಿವೇಶಗಳು ಈಗಲೂ ನಮ್ಮನ್ನೂ ಚಕಿತಗೊಳಿಸುತ್ತವೆ.

ಭಟರ ಖಡ್ಗಮಂಡಲದ ತುದಿಯಲ್ಲಿ ನೆಲೆಸಿರುವ ರಾಜಲಕ್ಷ್ಮೀ ಒಂದೆಡೆ ಸ್ಥಿರವಾಗಿ ನೆಲೆಸುವವಳಲ್ಲ. ಅವಳ ವಿಭ್ರಮ, ಹಾವ-ಭಾವ, ಬಾಗು-ಬಳುಕು, ವಿವಿಧ ಭಾವಭಂಗಿ ಚಂಚಲತೆಯ ದ್ಯೂತಕವಾಗಿವೆ. ಯುದ್ಧದ ಸನ್ನಿವೇಶ ಮತ್ತು ರಾಜಲಕ್ಷ್ಮೀಯ ಚಂಚಲತೆಯನ್ನು ಕವಿ ಪಂಪನು ಒಂದು ಕಟ್ಟಿನಲ್ಲಿ ಕ್ರಮವಾಗಿ ಪೋಣಿಸಿಕೊಡುವ ರೀತಿಯೇ ಒಂದು ಸೊಬಗಾಗಿದೆ. ಪಂಪನ ಈ ಮಾತುಗಳನ್ನು ಕೇಳುವ ಸಂದರ್ಭದಲ್ಲಿ ಆದಿಪುರಾಣ ಒಂದು ಕ್ಷಣ ಆಗಮಿಕ ಕಾವ್ಯ ಅನಿಸುವದೇ ಇಲ್ಲ. ಲೋಕದ ಜನತೆಯ ಘಟನೆಗಳನ್ನು ತಿಳಿಸುವ ಲೌಕಿಕ ಕಾವ್ಯ ಅನಿಸುತ್ತದೆ.

'ಭಟ ಖಡ್ಗಮಂಡಲೋತ್ಪಲ' ದಲ್ಲಿ ಭಟ ಅಂದರೆ ಸೈನಿಕ. ಯುದ್ಧದ ಸಂದರ್ಭದಲ್ಲಿ ಸೈನಿಕರು ಎದುರು-ಬದುರಾಗಿ ಪರಸ್ಪರ ಕಾದಾಟ ಮಾಡುವಾಗ, ತಮ್ಮ ಖಡ್ಗವನ್ನು ಎದುರಾಳಿಯ ಖಡ್ಗಕ್ಕೆ ತಾಗಿಸುತ್ತಾರೆ. ಆಗ ಅದು ಉತ್ಪಲದಂತೆಯೇ ಕಂಡುಬರುತ್ತದೆ. ಮುಂದುವರೆದು ಭಟರು ವೃತ್ತಾಕಾರವಾಗಿ ಚಲಿಸುತ್ತ ಹೋರಾಟ ಮಾಡುವುದು ಕಂಡುಬರುತ್ತದೆ. ಆ ಕಾದಾಟದ ದೃಶ್ಯವನ್ನು ಗಮನಿಸಿದಾಗ ಭಟರು ತಮ್ಮ ಖಡ್ಗವನ್ನು ಬೀಸುವ, ಎದುರೇಟು ನೀಡುವ ಅಂಗಭಂಗಿಗಳು ಉತ್ಪಲದಂತೆ ಅಂದರೆ ಕಮಲದಂತೆಯೇ ಕಂಡುಬರುತ್ತವೆ. ಹಾಗೆಯೇ ಭಟರ ಖಡ್ಗಗಳು ಒಂದಕ್ಕೊಂದು ಎದುರು-ಬದುರು ತಾಗಿದಾಗ ಅವು ಕೂಡ ಕಮಲವನ್ನೇ ಹೋಲುತ್ತವೆ ಎಂಬುದು ಸ್ಪಷ್ಟ.

'ವನ' ಎಂಬ ಪದವು ಕಾಡು, ತೋಟ, ನೀರು, ಗುಂಪು ಎಂಬರ್ಥಗಳನ್ನು ಹೊಂದಿದೆ. ಪಂಪನು ಈ ಸಂದರ್ಭದಲ್ಲಿ 'ವನ' ಎನ್ನುವ ಪದವನ್ನು 'ಗುಂಪು' ಎನ್ನುವ ಅರ್ಥದಲ್ಲಿಯೇ ಬಳಸಿರುವಂತೆ ತೋರುತ್ತದೆ. ಭಟರ ಗುಂಪುಗಳು ಪರಸ್ಪರ ಕಾದಾಡುವಾಗ ಅಲ್ಲಿಯೂ ಉತ್ಪಲದ ಕಲ್ಪನೆಯೇ ಮೂಡುತ್ತದೆ. ಯುದ್ಧದಲ್ಲಿ ಜಯಶಾಲಿ ಹೊಂದಿದವರಿಗೆ ಜಯಲಕ್ಷ್ಮೀ ಒಲಿವಳು ಎಂಬ ಅರ್ಥವೂ ಸ್ಫುರಿಸುತ್ತದೆ. ನಂತರ 'ವನ' ಎಂಬುದು ಕಾಡು ಎಂಬ ಅರ್ಥದಲ್ಲಿ ಬಳಕೆಯಾಗಿರುವಂತೆ ತೋರುತ್ತದೆ.

'ವಿಭ್ರಮ ಭ್ರಮರಿ' ಎಂಬಲ್ಲಿ ಒನಪು-ವೈಯ್ಯಾರದ, ಬೆಡಗು-ಬಿನ್ನಾಣದ ಚಂಚಲವಾದ ತುಂಬಿಯು ವನದಲ್ಲಿ ಮಧುಹೀರಿ, ಮನದಲ್ಲಿ ಮದತುಂಬಿದಾಗ ವೃತ್ತಾಕಾರವಾಗಿ ಹಾರಾಡುತ್ತದೆ. ಆಗ ಅದು ಕೂಡ ಉತ್ಪಲದಂತೆಯೇ ಕಂಡುಬರುತ್ತದೆ. ಆದ್ದರಿಂದ ಭಟರ ಖಡ್ಗಗಳೆಂಬ ಉತ್ಪಲವನದಲ್ಲಿ ಸೊಗಸಿನಿಂದ ನಲಿಯುವ ದುಂಬಿಯಂತಿರುವವಳೂ, ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುವವಳೂ, ಮನೋಹರಿಯಾದ, ಚಂಚಲೆಯಾದ ಈ ರಾಜ್ಯಲಕ್ಷ್ಮೀಯು ನಿನ್ನ ಎದೆಯಲ್ಲಿ ನಿಶ್ಚಲವಾಗಿ ನೆಲೆಸಲಿ ಎಂದು ಭರತೇಶನಿಗೆ ಬಾಹುಬಲಿಯೂ ಹೇಳುತ್ತಾನೆ. ಮುಂದುವರೆದು ನನ್ನಯ್ಯನಿತ್ತ ರಾಜ್ಯವನ್ನು ನಿನಗೆ ಸಮರ್ಪಿಸುವೆನು. ನೀನು ಬಯಸಿರುವ ಹೆಣ್ಣನ್ನೂ, ಭೂಮಿಯನ್ನು ನಾನು ಬಯಸಿದರೆ, ನನ್ನ ಕೀರ್ತಿಯು ಮಾಸದೆ? ಎನ್ನುತ್ತಾನೆ. ನಾನು ನಿನ್ನ ವಿಷಯದಲ್ಲಿ ತೋರಿಸಿದ ಅವಿನಯದಿಂದಾದ ದೋಷವನ್ನು ತಪಸ್ಸನ್ನು ಕೈಗೊಳ್ಳುವುದರ ಮೂಲಕ ಕಳೆದುಕೊಳ್ಳುವೆನು. ನೀನು ಮನಃಕಷಾಯವನ್ನು ತೊರೆ, ನನ್ನ ದುಶ್ಚೇಷ್ಟೆಯನ್ನು ಕ್ಷಮಿಸು ಎನ್ನುತ್ತಾನೆ.

ಇಂಥ ಕೆಲವು ಸನ್ನಿವೇಶಗಳಲ್ಲಿ ಪಂಪಕವಿಯು ಸಂಸ್ಕೃತ ಸಾಹಿತ್ಯದ ಬಾಣಕವಿಯ ಪ್ರಭಾವಕ್ಕೆ ಒಳಗಾಗಿರುವುದು ಕಂಡುಬರುತ್ತದೆ. "ಬಾಣಭಟ್ಟನಂತಹ ಕವಿಯ ಗದ್ಯವೂ ಎಷ್ಟೋಸಾರಿ ಲಯಬದ್ಧವಾಗಿರುವುದುಂಟು. ಬಾಣಭಟ್ಟನ ಗದ್ಯದಲ್ಲಿ ಛಂದೋಲಯವನ್ನು ಕಂಡುಕೊಂಡು ಪಂಪಕವಿ ತನ್ನ ವೃತ್ತಗಳಲ್ಲಿ ಸೇರಿಸಿಕೊಂಡಿದ್ದಾನೆ ಎಂದು ಪ್ರೋ. ಡಿ.ಎಲ್.ನರಸಿಹಾಚಾರ್ಯ ಹೇಳುತ್ತಾರೆ. ಉದಾ: ಆದಿಪುರಾಣದ "ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜಲಕ್ಷ್ಮೀ" ಎಂಬ ಪದಪುಂಜವನ್ನು ನೋಡಬಹುದು(ಜ್ಞಾನೋಪಾಸಕ, ಪು.೮೮). ಇದಕ್ಕೆ ಮೂಲ "ಖಡ್ಗಮಂಡಲೋತ್ಪಲ ವಿಶ್ರಮ ಭ್ರಮರೀ ಲಕ್ಷ್ಮೀ" ಎಂಬ ಬಾಣನ ವಾಕ್ಯ. ಈ ವಾಕ್ಯಕ್ಕೆ "ಸುಭಟ ಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿ ಲಕ್ಷ್ಮೀ" ಎಂಬ ಪಾಠಾಂತರವಿದೆ. (ನೋಡಿ- ಕಾದಂಬರೀ. ನಿರ್ಣಯಸಾಗರ ಮುದ್ರಣ, ೧೯೪೮, ಪು.೨೨೫). ಈ ಎರಡನೆಯ ಪಾಠವನ್ನೇ ಪಂಪ ಅನುಸರಿಸಿರುವುದು ಮತ್ತು ಈ ಪಾಠವೇ ಸೊಗಸಾದುದು (ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೧) ಎನಿಸುತ್ತದೆ.

ಆದ್ದರಿಂದಲೇ ಪಂಪ ಕವಿಯು ಆದಿಪುರಾಣದ ಭರತ-ಬಾಹುಬಲಿಯರ ನಡುವೆ ಧರ್ಮಯುದ್ಧಗಳಾದ ನಂತರ ಭರತೇಶನಿಗೆ ಉಂಟಾದ ಚಂಚಲ ರಾಜಲಕ್ಷ್ಮೀಯ ವ್ಯಾಮೋಹವನ್ನು, ಬಾಹುಬಲಿಯ ವೈರಾಗ್ಯವನ್ನು ಚಿತ್ರಿಸುವಲ್ಲಿ ಕವಿಯು ಈ ಪದ್ಯವನ್ನು ಬಳಕೆಮಾಡಿಕೊಂಡದ್ದು ಔಚಿತ್ಯಪೂರ್ಣವಾಗಿದೆ.

**ಆಕರಗಳು**

1. ಪಂಪ ಮಹಾಕವಿ ವಿರಚಿತ ಆದಿಪುರಾಣಂ; ಗದ್ಯಾನುವಾದ– ಕೆ.ಎಲ್.ನರಸಿಂಹ ಶಾಸ್ತ್ರಿ. ಕ.ಸಾ.ಪ ಬೆಂಗಳೂರು, ಮುದ್ರಣ– ೨೦೧೬
2. ‘ಕರ್ಣಾಟಕ ಕವಿಚರಿತೆ’ ಪ್ರಥಮ ಸಂಪುಟ; ಆರ್.ನರಸಿಂಹಾವಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಮುದ್ರಣ–೨೦೧೫
3. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಸಪ್ನ ಬುಕ್ ಹೌಸ್, ಬೆಂಗಳೂರು, ಎಂಟನೇ ಮುದ್ರಣ–೨೦೧೫